THE MYSORE LEGISLATIVE ASSEMBLY.

FIFTH DAY.

Friday, 24th October 1952.

The House met in the Legislative Assembly Hall, Old Public Offices, Bangalore, at Twelve of the Clock.

Mr. Speaker (Sri H. Siddaiya, B.A., LL.B.) in the Chair.

QUESTIONS AND ANSWERS.

Electrification of Hirisave Village in Channarayapatna Taluk.

Q.—7. Sri K. LAKKAPPA (Channarayapatna).—

Will the Government be pleased to state :—

(*a*) whether they have received application from the Panchayet of Hirisave in Channarayapatna Taluk for the electrification of that village ;

(*b*) whether they have sanctioned power to that village ; if not sanctioned, when do they sanction ?

A.—Sri T. SIDDALINGAIYA (Minister for Industries).—

(*a*) Yes.

(*b*) The question of power supply to Hirisave village can be considered only after the electrification of Nuggenhalli for which an estimate is sanctioned and materials are being collected. The work will be taken up shortly.

ಶ್ರೀ ಕೆ. ಲಕ್ಕಪ್ಪ —ನುಗ್ಗೇನಹಳ್ಳಿಗೆ ವಿದ್ಯುಚ್ಛಕ್ತಿ ಸರಬರಾಯಿಮಾಡಲು ಅಂದಾಜು ಮಂಜೂರಾಗಿ ಎಷ್ಟುಕಾಲವಾಯಿತು ?

*ಶ್ರೀ ಟಿ. ಸಿದ್ದಲಿಂಗಯ್ಯ.—ಒಂದು ವರ್ಷ ಕಾಲವಾಯಿತು.

ಶ್ರೀ ಕೆ. ಲಕ್ಕಪ್ಪ.—ಮೆಟೀರಿಯಲ್ಸ್ ಒಂದು ವರ್ಷದಿಂದ ಶೇಖರಿಸುತ್ತಿದ್ದಾರೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಹೌದು.

ಶ್ರೀ ಕೆ. ಲಕ್ಕಪ್ಪ.—ಎಷ್ಟು ಶೇಖರಣೆಯಾಗಿದೆ ?

ಶ್ರೀ ಟಿ. ಸಿದ್ದಲಿಂಗಯ್ಯ.—ಮಾಡುತ್ತಿದ್ದಾರೆ, ಮೂರು ತಿಂಗಳೊಳಗೆ ಆಗಿ, ಈ ವರ್ಷದ ಕೊನೆಯಲ್ಲಿ ಕೊಡುತ್ತೇವೆಂಬ ಭರವಸೆ ಇದೆ.

ಶ್ರೀ ಕೆ. ಲಕ್ಕಪ್ಪ.—ಲಿಫ್ಟ್ ಇರಿಗೇಷನ್‌ಗೆ ಹಿರೀಸಾವೆ ಸುತ್ತಮುತ್ತಲೂ ಪವರ್ ಕೊಟ್ಟು ಹಿರೀ ಸಾವೆಯವರು ಕಾಯುತ್ತಿರುವುದು ಗೊತ್ತಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅನೇಕ ಕಡೆ ಕೊಟ್ಟಿರುವುದು ಗೊತ್ತಿದೆ.

ಶ್ರೀ ಕೆ. ಲಕ್ಕಪ್ಪ.—ಒಂದು ವರ್ಷಕಾಲದಿಂದ ಮೆಟೀರಿಯಲ್ಸ್ ಶೇಖರಣೆ ಮಾಡುತ್ತಿರುವಾಗ ಕೂಡಲೇ ಹಿರೀಸಾವೆಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯ —ಕೂಡಲೇ ಎಂದು ಹೇಳುವುದಕ್ಕಾಗುವುದಿಲ್ಲ. ಹಣ ಕೂಡಲೇ ದೊರೆಯಬೇಕಲ್ಲ ! ಸಾಧ್ಯವಾದಷ್ಟು ಬೇಗ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ವಿದ್ಯುಚ್ಛಕ್ತಿ ಸರಬರಾಯಿಗೆ ಸೌಕರ್ಯ ಸರ್ಕಾರಕ್ಕೆ ಈಗ ಎಷ್ಟು ಒದಗುತ್ತಿದೆ ?

ಶ್ರೀ ಟಿ. ಸಿದ್ದಲಿಂಗಯ್ಯ.—ಪ್ರಶ್ನೆ ಅರ್ಥವಾಗಲಿಲ್ಲ.

* Asterisk indicates that the remarks or speeches have not been revised by the Member concerned.

ಶ್ರೀ ಎಸ್. ಸಿದ್ದಪ್ಪ.—ಸಾಮಾನುಗಳು ಈಗ ಎಷ್ಟು ಒದಗುತ್ತಿವೆ?

ಶ್ರೀ ಟಿ. ಸಿದ್ದಲಿಂಗಯ್ಯ.—ಈಗ ಹೆಚ್ಚಾಗಿ ಬರುತ್ತಿವೆ.

ಶ್ರೀ ಎಸ್. ಸಿದ್ದಪ್ಪ.—ಆದುದರಿಂದ ಅನೇಕ ಊರುಗಳಲ್ಲಿ ವಿದ್ಯುಚ್ಛಕ್ತಿ ಬೇಕೆಂದು ಕೇಳಿ ಅಂದಾಜುಗಳೂ ತಯಾರಾಗಿ ಹಾಗೆಯೇ ಉಳಿದು, ಇನ್ನು ಕೆಲವು ಊರುಗಳಿಗೆ ವಿದ್ಯುಚ್ಛಕ್ತಿ ದೊರೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಸಿದ್ದಲಿಂಗಯ್ಯ.—ಅಂದಾಜುಗಳು ಬೇಕಾದಷ್ಟಿವೆ. ಒಂದು ಕೆಲಸ ಪ್ರಾರಂಭ ಮಾಡುತ್ತೇವೆ, ಅದು ಮುಗಿದು ಸಾಮಾನುಗಳು ಉಳಿದರೆ ಬೇರೆ ಕೆಲಸಕ್ಕೆ ಉಪಯೋಗಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಮಾಗಡಿ ತಾಲ್ಲೂಕು, ಕುದೂರು ಮುಂತಾದ ಗ್ರಾಮಗಳಲ್ಲಿ.....

Mr. SPEAKER.—This refers to Channarayapatna Taluk. Any other supplementary relating to this?

ಶ್ರೀ ಎಸ್. ಸಿದ್ದಪ್ಪ.—ಇದೇರೀತಿ ಇನ್ನೂ ಬಿಟ್ಟಿರುವ ಊರುಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯ.—ಯೋಚನೆ ಮಾಡುತ್ತೇವೆ.

Mr. SPEAKER.—In fact four questions relate to the same subject. supplementaries relating to particular places may be put.

ಶ್ರೀ ಡಿ. ಆರ್. ಕರಿಗೌಡ (ಹಾಸನ)—ಹಾಸನಜಿಲ್ಲೆಯಲ್ಲಿ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಈ ವರ್ಷ ಎಷ್ಟು ಹಣ ಒದಗಿಸಿದ್ದೀರಿ?

ಶ್ರೀ ಟಿ. ಸಿದ್ದಲಿಂಗಯ್ಯ.—ಈ ವರ್ಷ ಈಗಾಗಲೇ ಒಟ್ಟು 20 ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದೇವೆ. ಕೇಂದ್ರ ಸರ್ಕಾರದಿಂದ ಸಾಲ ಬರುತ್ತದೆಂಬ ನಿರೀಕ್ಷೆಯಿದೆ. ಆದುದರಿಂದ ಈ ಬಾಬಿಗೆ ಇನ್ನೂ ಹೆಚ್ಚು ಹಣ ಒದಗಿಸುವ ನಿರೀಕ್ಷೆಯಿದೆ.

ಶ್ರೀ ಡಿ. ಆರ್. ಕರಿಗೌಡ.—ಈ ವರ್ಷ ಒದಗಿಸಿರುವ 20 ಲಕ್ಷ ರೂಪಾಯಿಗಳಲ್ಲಿ ಹಾಸನ ಜಿಲ್ಲೆಗೆ ಎಷ್ಟು ಒದಗಿಸಿದೆ?

ಶ್ರೀ ಟಿ. ಸಿದ್ದಲಿಂಗಯ್ಯ.—ಡಿಸ್ಟ್ರಿಕ್ಟು ವಾರಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಗಳಿಗೆ ಕೊಡುವುದಕ್ಕಿಂತ ಹೆಚ್ಚಾಗಿ ಹಾಸನ, ಬೆಂಗಳೂರು, ಕೋಲಾರ ಇಂಥಾ ದೊಡ್ಡ ಊರುಗಳಿಗೆ ಕೊಡುವುದು ನ್ಯಾಯವೆ?

Mr. SPEAKER.—Such questions of policy may be discussed on another occasion.

ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ವಿದ್ಯುಚ್ಛಕ್ತಿಯನ್ನು ಕೊಡುವುದರಲ್ಲಿ ಯಾವುದಾದರೂ ನೀತಿಯನ್ನನುಸರಿಸಿ ಕೊಡುತ್ತಿದ್ದೀರಾ?

ಶ್ರೀ ಟಿ. ಸಿದ್ದಲಿಂಗಯ್ಯ.—ಒಂದು ಲೈನ್ ತೆಗೆದುಕೊಂಡು ಹೋದರೆ, ಹಾಗೆಯೇ ಮುಂದೆ ಹೋಗುವುದೇ ನೀತಿ.

ಶ್ರೀ ಕೆ. ವಿ. ಬೈರೇಗೌಡ.—ಕೇವಲ ಒತ್ತಾಯದ ಮೂಲಕ ಕೊಡದೆ, ಎಲ್ಲೆಲ್ಲಿ ಅರ್ಧ ಕೆಲಸವಾಗಿದೆಯೋ ಅಲ್ಲೆಲ್ಲಾ ಪಕ್ಷಪಾತವಿಲ್ಲದೆ ಪೂರ್ತಿಮಾಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯ.—ಮಾಡುತ್ತೇವೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿ (ಚಿತ್ರದುರ್ಗ).—ಕೇಂದ್ರ ಸರ್ಕಾರದಿಂದ 50 ಲಕ್ಷ ರೂಪಾಯಿಗಳು ಬಂದಿಲ್ಲವೆ?

ಶ್ರೀ ಟಿ. ಸಿದ್ದಲಿಂಗಯ್ಯ.—ಬರುವ ನಿರೀಕ್ಷಣೆಯಿದೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿ.—ಎಷ್ಟು ವರ್ಷದಲ್ಲಿ?

ಶ್ರೀ ಟಿ. ಸಿದ್ದಲಿಂಗಯ್ಯ.—ಸದ್ಯದಲ್ಲೇ ಬರುವ ನಿರೀಕ್ಷಣೆಯಿದೆ.

———